**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**
**ಸಿ ಸಿ ನಂಃ977/2021**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಸಣ್ಣಪ್ಪ | ಸಿ.ಡಬ್ಲ್ಯು | 1 |
| ತಂದೆಯ ಹೆಸರು | ಃ ಮಲ್ಲೇಗೌಡ | ಪಿ.ಡಬ್ಲ್ಯು | 1 |
| ವಯಸ್ಸು | ಃ 78 ವರ್ಷ | | |
| ಉದ್ಯೋಗ | ಃ ಕೃಷಿ | | |
| ವಾಸ ಸ್ಥಳ | ಃ ತರೀಕೆರೆ | | |

**ದಿನಾಂಕಃ 21-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ನಾನು 2021 ನೇ ಸಾಲಿನಲ್ಲಿ ನಾನು 15 ಕುರಿಗಳನ್ನು ಸಾಕಿಕೊಂಡಿದ್ದೇನು. ನನ್ನ ಪಕ್ಕದ ಮನೆಯ ಸೈಟ್‌ನಲ್ಲಿರುವ ಶಡ್ ನಲ್ಲಿ ಕುರಿಗಳನ್ನು ಕಟ್ಟುತ್ತಿದ್ದೇನು. ಈಗ ಸುಮಾರು ಎರಡು ವರ್ಷಗಳ ಹಿಂದೆ ನನ್ನ 10 ಕುರಿಗಳನ್ನು ಕೊಚ್ಚಿ ಹಾಕಲಾಗಿತ್ತು, 1 ಕುರಿಯ ಕಿವಿ ಕತ್ತಿರಿಸಿದ್ದರು ಮತ್ತು 4 ಕುರಿಗಳನ್ನು ಕಳವು ಮಾಡಿದ್ದರು. ಈ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿ ದೂರಿನ ಮೇಲೆ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ.1, ಸಾಕ್ಷಿ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ಪೊಲೀಸರು ಮಾರನೇ ದಿನ ಬಂದು ಸ್ಥಳ ತನಿಖೆ ಮಾಡಿದ್ದಾರೆ. ಸ್ಥಳ ತನಿಖೆಯ ಮೇಲೆ ನನ್ನ ಸಹಿ ಇದೆ, ಅದನ್ನು ನಿಪಿ.2, ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಯಿತು. ಸ್ವಲ್ಪ ದಿನಗಳ ನಂತರ ಪೊಲೀಸರು ನನಗೆ 10 ಕುರಿಗಳನ್ನು ಹಿಂತಿರುಗಿಸಿದರು. ಇಂಡೆಮ್ನಿಟಿ ಬಾಂಡ್ ಮೇಲೆ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.3 ಸಹಿಯನ್ನು ನಿಪಿ.3 ಎ ಎಂದು ಗುರುತಿಸಲಾಯಿತು. ಫೋಟೊಗಳನ್ನು ನಿಪಿ. 4 ರಿಂದ 13 ಎಂದು ಗುರುತಿಸಲಾಯಿತು.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-**

ನಾನು ದೂರಿನಲ್ಲಿ 4 ಕುರಿಗಳನ್ನು ಕೊಚ್ಚಿ ಹಾಕಿ, 10 ಕುರಿಗಳನ್ನು ಕದ್ದು ಕೊಂಡು ಹೋಗಿದ್ದಾರೆ ಎಂದು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನಗೆ 10 ಕುರಿಗಳನ್ನು ವಾಪಸ್ಸು ಕೊಟ್ಟಿದ್ದಾರೆ ಎಂದರೆ ಸರಿ .

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಕಳ್ಳತನ ಯಾರು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ ಎಂದರೆ ಸರಿ.

CW 1
PW 1



<u>**ಮರುವಿಚಾರಣೆ :**</u> ಇಲ್ಲ಼

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಒ***

Sd/-

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***